**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ.ನಂ: 412/2015**

**ಸಿ ಡಬ್ಲ್ಯೂಃ 1, ಪಿ ಡಬ್ಲ್ಯೂಃ 2**

**ಸಾಕ್ಷಿದಾರರ ಹೆಸರು** ಃ ಬಸಮ್ಮ ಅಲಿಯಾಸ್ ನಾಗರತಮ್ಮ
ಗಂಡ **ಹೆಸರು** ಃ ಮಹೇಶ
**ವಯಸ್ಸು** ಃ **45 ವರ್ಷ**
**ವೃತ್ತಿ** ಃ ವ್ಯವಸಾಯ
**ವಾಸ** ಃ ಹೂಡ ಗ್ರಾಮ. ಸಿಂದನೂರು ತಾಲುಕ್

**ಪ್ರಮಾಣ ಮಾಡಿದ ದಿನಾಂಕಃ 02.11.2022.**

**ಮುಖ್ಯ ವಿಚಾರಣೆಃ ಎ .ಪಿ .ಪಿ ಇವರಿಂದ.**

ಈ ಪ್ರಕರಣದಲ್ಲಿಯ ಮೃತ ಕಿರಣ್ ನನ್ನ ಮಗ ಇರುತ್ತಾನೆ. ಸುಮಾರು **7** ವರ್ಷಗಳ ಹಿಂದೆ ನನ್ನ ಮಗ ತಾಯಮ್ಮನ ಗುಡಿ ಹತ್ತಿರ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾನೆ. ಈ ಕುರಿತು ನಾನು ಪೋಲಿಸರಿಗೆ ದೂರನ್ನು ನೀಡಿದ್ದೇನೆ, ದೂರು/ಪ್ರಥಮ ವರದಿಯನ್ನು ನ್ನು ನಿಪಿಃ **2** ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಅಪಘಾತ ಯಾರ ತಪ್ಪಿನಿಂದ ಮತ್ತು ಯಾರ ನಿರ್ಲಕ್ಷತನದಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ.

**೨. ಈ ಹಂತದಲ್ಲಿ ಸಸಅ ರವರು** ಬಾಗಶಃ **ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು ಕೋರಿಕೆಯ ಮೇರೆಗೆ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಶ್ರೀ ಎ ಪಿ ಪಿ ರವರಿಂದ**

ನಾನು ನನ್ನ ಮಗ ಪ್ರಯಣಿಸುತಿದ್ದ ದ್ವಿಚಕ್ರ ವಾಹನ ಸಂಖ್ಯೆ ಮತ್ತು ಬಸ್ಸಿನ ಸಂಖ್ಯೆ ಹಾಗೂ **10** ಜನ ಗಾಯಳುಗಳ ಹೆಸರನ್ನು ಬರೆಸಿದ್ದೇನೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ ನ್ಯಾಯಾಲಯದ ಮುಂದೆ ಇರುವ ಆರೋಪಿಯ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ

ನಸರಿಯಲ್ಲ. ಪೋಲಿಸರಿಗೆ ನೀಡಿದ ಮರು ಹೇಳಿಕೆ ಬಾಗ ನಾನು..... ಸರಿ ಇರುತ್ತದೆ ಎಂಬ ಬಾಗವನ್ನು ಸಾಕ್ಷಿಗೆ ಓದಿ ಹೇಳಿ ಕೇಳಲಾಗಿ ಸಾಕ್ಷಿ ನಿರಾಕರಿಸಿದ್ದರಿಂದ ಸದರಿ ಬಾಗವನ್ನು ನಿಪಿಃ **3** ಎಂದು ಗುರುತಿಸಲಾಯಿತು. ನಿಪಿಃ **3** ರಂತೆ ಮರು ಹೇಳಿಕೆ ನೀಡಿದ್ದರು ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸರಿ ಇದೆ**

**ಜೆ ಎಂ ಎಫ್ ಸಿ ಸಿರುಗುಪ್ಪ.**